# ಬಾಹ್ಯಾಕಾಶದಲ್ಲೂ ಹೆಣ್ಮಕ್ಕಳೇ ಸ್ಟ್ರಾಂಗು

ಸಮಾಜದ ಬಹುತೇಕ ಕ್ಷೇತ್ರಗಳಲ್ಲಿ ಜೀವಂತವಿರುವ ಲಿಂಗ ತಾರತಮ್ಯ 'ಬಾಹ್ಯಾಕಾಶ' ಕ್ಷೇತ್ರದಲ್ಲೂ ಇದೆ. ಪುರುಷನಿಗಿಂತಲೂ ಹೆಚ್ಚು ಸಾಮರ್ಥ್ಯವಿದ್ದರೂ ಬಾಹ್ಯಾಕಾಶಯಾನಿ ಆಗುವುದಕ್ಕೆ ಮಹಿಳೆಗೆ ದೊರೆಯುತ್ತಿರುವ ಅವಕಾಶಗಳು ಅತ್ಯಲ್ಪ. ಈವರೆಗೆ ಒಬ್ಬ ಮಹಿಳೆಯೂ ಚಂದ್ರನ ಅಂಗಳದಲ್ಲಿ ಹೆಜ್ಜೆಯಿಟ್ಟಿಲ್ಲ. 'ಬಾಹ್ಯಾಕಾಶ ಸಪ್ತಾಹ' (ಅ. 4–10) ಸಂದರ್ಭದಲ್ಲಿ, ಅಂತರಿಕ್ಷದಲ್ಲಿ ಮಹಿಳೆಯ ಹೆಜ್ಜೆಗುರುತುಗಳ ದಾಖಲಿಸುವ ಪ್ರಯತ್ನ.

■ **ಗುರುರಾಜ್ ಎಸ್. ದಾವಣಗೆರೆ**



ಆಕೆ ಗಾರ್ಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಉತ್ಸಾಹಿ ಮಹಿಳೆ. ಸಾಕಷ್ಟು ಆರ್ಥಿಕ ಆದಾಯ ಹೊಂದಿದ್ದ ಆಕೆಗೆ ಬಿಡುವಿನ ವೇಳೆಯಲ್ಲಿ ಪ್ಯಾರಾಚೂಟ್ ಜಂಪಿಂಗ್ ಮಾಡುವ ಹವ್ಯಾಸ. ಅದು ಆಕೆಯ ಜೀವನದ ಅವಿಸ್ಮರಣೀಯ ಸಾಧನೆಗೆ ಕಾರಣವಾಗುತ್ತದೆಂದು ಯಾರೂ ಅಂದುಕೊಂಡಿರಲಿಲ್ಲ. 1963ರ ಜೂನ್ 16ರಂದು ಬಾಹ್ಯಾಕಾಶಕ್ಕೆ ನೆಗೆದ ರಷ್ಯಾದ 'ವೊಸ್ತೋಕ್–6' ಆಕಾಶನೌಕೆಯಲ್ಲಿ ಬಾಹ್ಯಾಕಾಶ ಪ್ರವೇಶಿಸಿದ ವಿಶ್ವದ ಪ್ರಥಮ ಮಹಿಳೆ ಎಂಬ ಅಪರೂಪದ ಗೌರವ ಅವಕಾಶ ಪಡೆದ ಆಕೆಯ ಹೆಸರು ವೆಲೆಂಟಿನಾ ತೆರೆಶ್ಕೊವ. ಬಾಹ್ಯಾಕಾಶ ಯಾತ್ರೆ ಮಾಡಿ ಇತಿಹಾಸ ನಿರ್ಮಿಸಿದ ತೆರೆಶ್ಕೊವ ಮಹಿಳಾ ಗಗನಯಾತ್ರಿಗಳ ಬಾಹ್ಯಾಕಾಶ ಸಾಹಸಗಳಿಗೆ ಆರು ದಶಾಕಾಲ ಹಿಂದೆಯೇ ಸಮರ್ಥ ಮುನ್ನುಡಿ ಬರೆದರು. ಅಂದಿನಿಂದ ಶುರುವಾದ ಮಹಿಳಾ ಗಗನಯಾತ್ರಿಗಳ ಗಗನಯಾನ ಇತ್ತೀಚಿನ ಕ್ರಿಸ್ಟಿನಾ ಕೋಚ್‌ವರೆಗೂ ಮುಂದುವರೆದಿದೆ. ಆದರೆ ಅದು ಸುಲಭದ ಪ್ರಯಾಣವಾಗಿರಲಿಲ್ಲ.

ಈ ಬಾರಿಯ 'ವಿಶ್ವ ಬಾಹ್ಯಾಕಾಶ ಸಪ್ತಾಹ'ವನ್ನು (ಅಕ್ಟೋಬರ್ 4ರಿಂದ 10) 'ಬಾಹ್ಯಾಕಾಶದಲ್ಲಿ ಮಹಿಳೆ' ಎಂಬ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ.

ಮಹಿಳೆ ಹಾರಿದ ದಾರಿ

ಬಾಹ್ಯಾಕಾಶಕ್ಕೆ ತೆರಳಿದ ಎರಡನೆಯ ಮಹಿಳೆ ಕೂಡಾ ರಷ್ಯಾದವರು. 1982ರ ಅಗಸ್ಟ್ 19ರಂದು ನಭಕ್ಕೆ ಹಾರಿದ ಸ್ವೆಟ್ಲಾನ ಸವಿಟ್ಸಕಾಯ ಸೀದಾ ತೆರಳಿದ್ದು ರಷ್ಯಾ ಬಾಹ್ಯಾಕಾಶದಲ್ಲಿ ನಿರ್ಮಿಸಿದ್ದ ಅಂತರಿಕ್ಷ ನಿಲ್ದಾಣ 'ಸಲ್ಯೂಟ್–7'ಕ್ಕೆ. ಇದಾದ ಒಂದು ವರ್ಷಕ್ಕೆ ಅಮೆರಿಕದ ಸ್ಯಾಲಿ ರೈಡ್ 18ನೇ ಜೂನ್ 1983ರಂದು ಬಾಹ್ಯಾಕಾಶಕ್ಕೆ ತೆರಳಿ ಆ ಸಾಧನೆ ಮಾಡಿದ ಮೊದಲ ಅಮೆರಿಕನ್ ಮಹಿಳೆ ಎನಿಸಿದರು. ರಷ್ಯಾದ ಸ್ವೆಟ್ಲಾನ ಸವಿಟ್ಸಕಾಯ ಮತ್ತು ಅಮೆರಿಕದ ಸ್ಯಾಲಿ ರೈಡ್ ಎರಡೆರೆಡು ಸಲ ಬಾಹ್ಯಾಕಾಶಕ್ಕೆ ಹೋಗಿಬಂದ ದಾಖಲೆಯನ್ನೂ ಬರೆದರು.

ಶೂನ್ಯಗುರುತ್ವ ಅಥವ ಮೈಕ್ರೋ ಗ್ರ್ಯಾವಿಟಿಯ ಅಧ್ಯಯನಕ್ಕೆಂದೇ ಹಾರಿಸಲಾದ ಪ್ರಥಮ ಸ್ಪೇಸ್ ಶಟಲ್‌ನ ಕಮಾಂಡರ್ ಆಗಿ ಕೆಲಸ ಮಾಡುವ ಅವಕಾಶ ಡಾ. ತಮರ ಜೆರ್ಮಿಗಾನ್‌ಗೆ ಸಿಕ್ಕಿತ್ತು. ಇದಾದ ನಂತರ ಕೆನಡಾದ ರಾಬರ್ಟ್ ಬಂಡರ್, ಫ್ರಾನ್ಸ್‌ನ ಕ್ಲೌಡೀ ಹೈಗನರ್,